# “ವಿಶ್ವ ಓಝೋನ್ ದಿನಾಚರಣೆ-೨೦೨೩”

**ದಿನಾಂಕ:** 16.09.2023 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ** ಹಾಗೂ **ಸರ್ಕಾರಿ ಪ್ರೌಢ ಶಾಲೆ, ಕೆರಕಲಮಟ್ಟಿ , ತಾ:ಬಾದಾಮಿ** ಇವರ ಸಂಯುಕ್ತ ಆಶ್ರಯದಲ್ಲಿ **“ವಿಶ್ವ ಓಝೋನ್ ದಿನಾಚರಣೆ–2023”** ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ **ಸರ್ಕಾರಿ ಪ್ರೌಢ ಶಾಲೆ, ಕೆರಕಲಮಟ್ಟಿ** ಯ **ಒಟ್ಟು** 150 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ಟಿ.ಬಿ.ಅಳ್ಳೊಳ್ಳಿ** ಕುಲಸಚಿವರು ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ಟಿ.ಬಿ.ಅಳ್ಳೊಳ್ಳಿ** ಕುಲಸಚಿವರು ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು, ವಿದ್ಯಾರ್ಥಿಗಳಿಗೆ ವಾಯು ಮಾಲಿನ್ಯ ಹಾಗೂ ಹೆಚ್ಚಿನ ರಾಸಾಯನಿಕಗಳ ಉಪಯೋಗದಿಂದ ಓಝೋನ್ ಪದರಿನಲ್ಲಿ ಆಗುತ್ತಿರುವ ಸವಕಳಿ ಯ ಬಗ್ಗೆ ವಿಸ್ತೃತವಾಗಿ ತಿಳಿಸಿದರು. ಅದರಂತೆ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಉಪಯೋಗವನ್ನು ಪಡೆದುಕೊಂಡು ತಮ್ಮ ವೈಜ್ಞಾನಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಅದರಂತೆ, ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದಂತಹ **ಶ್ರೀ ಎಸ್.ವೈ.ಮಡಿವಾಳರ, ವಿಜ್ಞಾನ ಶಿಕ್ಷಕರು,** ಸರ್ಕಾರಿ ಪ್ರೌಢ ಶಾಲೆ, ಕೆರಕಲಮಟ್ಟಿ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಓಝೋನ್ ಪದರಿನಿಂದ ಪ್ರಾಣಿ ಹಾಗೂ ಸಸ್ಯ ಸಂಕುಲಗಳಿಗೆ ಆಗುತ್ತಿರುವ ಉಪಯೋಗವನ್ನು ತಿಳಿಸುತ್ತ, ಓಝೋನ್ ಪದರಿನ ರಕ್ಷಣೆ ಬಗ್ಗೆ ವಿದ್ಯಾರ್ಥಿಗಳಿಗೆ ಕೆಲ ಗಮನಾರ್ಹ ಮಾಹಿತಿಗಳನ್ನು ತಿಳಿಸಿದರು.

ತದನಂತರ, ಕಾರ್ಯಕ್ರಮದ ಅಧ್ಯಕ್ಷರಾಗಿ ಆಗಮಿಸಿದಂತಹ **ಶ್ರೀ ಬಿ.ಹೆಚ್. ನದಾಫ,** ಮುಖ್ಯೋಪಾದ್ಯಯರು, ಸರ್ಕಾರಿ ಪ್ರೌಢ ಶಾಲೆ, ಕೆರಕಲಮಟ್ಟಿ ರವರು ಮಾತನಾಡಿ, ಒಝೋನ್ ಪದರಿನ ರಚನೆಯ ವೈಜ್ಞಾನಿಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು ಹಾಗೂ ಓಝೋನ್ ಪದರಿನ ಸವಕಳಿಗೆ ಕಾರಣವಾದ ಕ್ಲೋರೋಫ್ಲೋರೊ ಕಾರ್ಬನ್, ಸಲ್ಫರ್ ಡೈ ಆಕ್ಸೈಡ್ ಹಾಗೂ ಇನ್ನಿತರ ಅನಿಲಗಳ ನಿಯಮಿತ ಉಪಯೋಗಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಮುಂದುವರೆದು, ಕಾರ್ಯಕ್ರಮದ ಅಂಗವಾಗಿ **ದಿನಾಂಕ:** 14.09.2023 ರಂದು ಆಯೋಜಿಸಲಾಗಿದ್ದ **“ವೈಜ್ಞಾನಿಕ ರಸಪ್ರಶ್ನೇ ಸ್ಪರ್ಧೆ”** ಯ ವಿಜೇತ ವಿದ್ಯಾರ್ಥಿಗಳಾದ **ಕುಮಾರಿ. ಭಾಗ್ಯಶ್ರೀ ಅಂಕಲಗಿ (ಪ್ರಥಮ), ಕುಮಾರ. ಶರತ್ ಬೂದಿನಗಡ (ದ್ವಿತೀಯ), ಕುಮಾರಿ. ಚೈತ್ರಾ ಮ್ಯಾಗಿನಮನಿ (ತೃತೀಯ), ಕುಮಾರ. ಶ್ರೀಧರ ಕಂಬಾರ (ತೃತೀಯ)** ರವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಸದರಿ ಕಾರ್ಯಕ್ರಮವನ್ನು, ಶಾಲೆಯ ವಿದ್ಯಾರ್ಥಿನಿ **ಕುಮಾರಿ. ಕವನ ಬಡಿಗೇರ** ಪ್ರಾರ್ಥನೆ ಮೂಲಕ ಪ್ರಾರಂಭಿಸಿದರು, **ಶ್ರೀ ಪಿ.ಬಿ. ಭಜಂತ್ರಿ,** ಶಿಕ್ಷಕರು, ನಿರೂಪಿಸಿದರು ಹಾಗೂ **ಶ್ರೀ ಟಿ.ಟಿ ನಾರಾಯಣಕರ್,** ಶಿಕ್ಷಕರು, ವಂದಿಸಿದರು.

**ಮುಂದುವರೆದು,** ಸದರಿ ಕಾರ್ಯಕ್ರಮದಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಿಬ್ಬಂದಿಗಳಾದ **ಶ್ರೀ ಈರಣ್ಣಾ ಬುಳ್ಳಾ** (ಕ್ಯೂರೇಟರ್), **ಶ್ರೀ ಆಸೀಫ ಬಾಗವಾನ** (ತಾಂತ್ರಿಕ ಸಹಾಯಕರು), **ಶ್ರೀ ಗಂಗನಗೌಡ ಪಾಟೀಲ** (ಸಹಾಯಕರು) ಹಾಗೂ ಸರ್ಕಾರಿ ಪ್ರೌಢ ಶಾಲೆ, ಕೆರಕಲಮಟ್ಟಿಯ ಶಿಕ್ಷಕಿಯರಾದ **ಶ್ರೀಮತಿ ಆರ್.ವೈ. ಬಿರಾದಾರ, ಶ್ರೀಮತಿ ಪಿ.ಹೆಚ್.ಜಾಲಿಹಾಳ,** ದೈಹಿಕ ಶಿಕ್ಷಕಿ **ಶ್ರೀಮತಿ ಆರ್.ಟಿ. ಕಕರಟ್ಟಿ** ರವರು ಉಪಸ್ಥಿತರಿದ್ದರು.


















ಕೆರಕಲಮಟ್ಟಿ


ಕೆರಕಲಮಟ್ಟಿ










ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ,




ಸ್ಥಾಪನಾ.ದಿ.14-08-2006.
ಕರ್ನಾಟಕ ಸರಕಾರ
ಶ್ರೀಮಂತ ಮಹೇಶ ಪಾಂಡುರಂಗಗೌಡ ನಾಡಗೌಡ್ರ
ಸರಕಾರಿ ಪ್ರೌಢ ಶಾಲೆ ಕೆರಕಲಮಟ್ಟಿ
ತಾ: ಬಾದಾಮಿ.
ಜಿ: ಬಾಗಲಕೋಟೆ.